ಓಎಸ್ 77/2020

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 04.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ**

ನನ್ನ ತಂದೆಯ ತಂದೆ ಸಿ.ಆರ್.ರಾಮಲಿಂಗಪ್ಪ ಬಿನ್ ಆರ್. ರಾಮಯ್ಯ ರವರು ನಮ್ಮೂರಿನಲ್ಲಿ ಹಲವಾರು ವ್ಯವಹಾರಗಳಿಗೆ ಸಂಬಂಧಿಸಿದಂತೆ ಪತ್ರ ಬರಹಗಾರರಾಗಿ ದಾಖಲಾತಿಗಳನ್ನು ಬರೆದಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ತೋರಿಸಿ ದಸ್ತಾವೇಜು ಉಲ್ಲೇಖ ನಂಬರ್ 3536 ಎಂದು ನಮೂದಿಸಿರುವುದು ನಿಪಿ 1 ಕ್ರಯಪತ್ರದ ಕೊನೆಯ ಪುಟ್ಟದಲ್ಲಿ ನಮೂದಿಸಿರುವ ದಸ್ತಾವೇಜು ಸಂಖ್ಯೆ 3536 ಆಗಿರುತ್ತದೆ ಎಂದು ಎರಡು ದಸ್ತಾವೇಜುಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಿ ಒಪ್ಪಿಕೊಂಡಿರವುದರಿಂದ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ 16 ಎಂದು ಗುರ್ತಿಸಲಾಯಿತು. ಓಎಸ್ 74/2017 ಕ್ಕೂ ಈ ದಾವೆಗೂ ಸಂಬಂಧ ಇಲ್ಲ ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಓಎಸ್ 74/2017 ರಲ್ಲಿ ನಾನು ಪಕ್ಷಗಾರನು ಅಲ್ಲವೋ ನನಗೆ ಮಾಹಿತಿ ಇಲ್ಲ. ಓಎಸ್ 74/2017 ರ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿ. ಓಎಸ್ 74/2017 ರ ದಾವೆ ವಜಾಗೊಂಡಿರುದರ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

2. ಈ ದಾವೆಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವಾಗಿದ್ದು ಅದರ ವಿರುದ್ಧ ಎಂ.ಎ. 9/2022 ರಂತೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾಗೊಂಡಿದ್ದು, ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ ಪಿ ನಂಬರ್ 20175/2022 ರಂತೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಯತಾಸ್ಥಿತಿ ಕಾಪಾಡಿಕೊಂಡು ಹೋಗುವಂತೆ ಆದೇಶ ವಾಗಿರುತ್ತದೆ ಎಂದರೆ

ಸರಿ. ದಾವ ಆಸ್ತಿಯಲ್ಲಿ ವಾದಿ ಕಂಪೌಂಡ್ ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ಕಂಪೌಂಡ್ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕಂಪೌಂಡ್ ಕಟ್ಟಲು ನಾನು ಲೆಸೆನ್ಸ್ ಪಡೆದಿರುವುದಿಲ್ಲ. ದಾವ ಆಸ್ತಿಯು ನನ್ನ ಹೆಸರಿನಲ್ಲಾಗಲಿ ಅಥವಾ ನನ್ನ ತಂದೆಯ ಹೆಸರಿನಲ್ಲಾಗಲಿ ಖಾತೆ ಇಲ್ಲ ಆದರೆ ನನ್ನ ತಾತನ ಹೆಸರಿನಲ್ಲಿ ಇರುತ್ತದೆ.

3. ನಿಡಿ 5 ರಲ್ಲಿ ನಮೂದಿಸಿರುವ ಆಸ್ತಿಗಳನ್ನು ನನ್ನ ತಾತ ಸಿ.ಆರ್. ರಾಮಲಿಂಗಪ್ಪ ರವರು ನಿಪಿ 1 ಮತ್ತು 2 ಕ್ರಯಪತ್ರದ ಮೂಲಕ ವಾದಿಯ ತಂದೆ ಸಿ.ಜಿ. ಗುರಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುತ್ತಾರೆ. ನಿಪಿ 1 ಮತ್ತು 2 ರ ಕ್ರಯಪತ್ರದ ವಿಚಾರ ನನ್ನ ತಂದೆ ಮತ್ತು ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ಸದರಿ ಕ್ರಯಪತ್ರಗಳಲ್ಲಿ ಜಂಜರ್ ನಂಬರ್ ಇಲ್ಲ, ಕ್ರಮ ಸಂಖ್ಯೆ ಇಲ್ಲ ಮತ್ತು ಖಾತಾ ಸಂಖ್ಯೆ ಇಲ್ಲ ಅವುಗಳು ದೋಷಪುರಿತ ಕ್ರಯಪತ್ರಗಳಾಗಿವೆ ಎಂದು ನುಡಿಯುತ್ತಾರೆ. ನಿಪಿ 1 ಮತ್ತು 2 ರ ಕ್ರಯಪತ್ರಗಳನ್ನು ನಾನಾಗಲಿ, ನನ್ನ ತಂದೆಯಾಗಲಿ ಪ್ರಶ್ನೆ ಮಾಡಿಲ್ಲ ಕಾರಣ ಕ್ರಯವೆ ಆಗಿಲ್ಲ. ನಿಪಿ 1 ಮತ್ತು 2 ರ ಕ್ರಯಪತ್ರಗಳು ನೋಂದಣಿಯಾಗಿ ಸುಮಾರು 75 ವರ್ಷಗಳು ಕಳೆದಿವೆ ಎಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ನನ್ನ ತಾತ ಸಿ.ಆರ್ ರಾಮಲಿಂಗಪ್ಪ ರವರು ಬಿಕ್ಲಂದಾರರಾಗಿ ಬರೆದಿರುವ ನಿಪಿ 15 ವಿಭಾಗದ ಕರಾರಿನಂತೆ ವಾದಿಯ ಹಿಸ್ಸೆಗೆ ದಾವ ಆಸ್ತಿಗಳು ಬಂದಿರುತ್ತವೆ ಎಂದರೆ ಸಾಕ್ಷಿಯು ವಿಭಾಗದ ಕರಾರಿಗೂ ದಾವ ಆಸ್ತಿಗಳಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಿಪಿ 15 ರ ವಿಭಾಗದ ಕರಾರಿನಂತೆ ದಾವ ಆಸ್ತಿಗಳು ವಾದಿಯ ಹೆಸರಿಗೆ ಖಾತೆಯಾಗಿದ್ದು ವಾದಿಯು ದಾವ ಆಸ್ತಿಗಳಿಗೆ ಕಂದಾಯವನ್ನು ಸಹ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಗಳಿಗೆ ನೀವು ಏನಾದರೂ ಕಂದಾಯ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಕಂದಾಯ ಪಾವತಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯು ದಾವ ಆಸ್ತಿಗಳಿಗೆ ಕಂದಾಯ ಪಾವತಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನಗಾಗಲಿ, ನನ್ನ ತಂದೆಗಾಗಲಿ ದಾವ ಆಸ್ತಿಗಳ ಮೇಲೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಸಿ.ಆರ್.ರಾಮಲಿಂಗಪ್ಪ ರವರು ದಾವ

ಓಎಸ್ 77/2020

ಡಿಡಬ್ಲ್ಯೂ 1

ಆಸ್ತಿಗಳ ಮೇಲಿನ ಹಕ್ಕುಗಳನ್ನು ನಿಪಿ 1 ಮತ್ತು 2 ಕ್ರಯಪತ್ರದ ಮೂಲಕ ವಾದಿಯ ತಂದೆಗೆ ಹಸ್ತಾಂತರ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ